







ಬದಿಯಲ್ಲಿಯೇ ಮಿರರ್ ಲೇಕ್ಸ್ ಎಂಬ ನಾಮಫಲಕವೂ ಕಾಣಿಸಿತು. ಐದೇ ನಿಮಿಷದಲ್ಲಿ ಪುಟ್ಟ ಪುಟ್ಟ ಸರೋವರಗಳ ದಡ ತಲುಪಿದ್ದೆವು. ನಡೆದು ಹೋಗಲು ಕೊಂಬಿನಾಕಾರದ ಸರೋವರಗಳ ದಡದಲ್ಲಿ ಮರದ ದಿಮ್ಮಿಗಳ ಹಲಗೆಗಳ ಹಾಸು ರಚಿಸಿದ್ದರು. ಆಳೆತ್ತರದ ಗೊಂಡಾರಣ್ಯದ ನಡುವೆ ಪ್ರಶಾಂತ ವಾತಾವರಣ, ಮಿರ್ರರ್ ಲೇಕ್ಸ್‌ನ ನಿಂತ ನೀರು ಸ್ತಬ್ಧವಾಗಿತ್ತು. ಯಾವ ಪುಟ್ಟ ತೆರೆಗಳೂ ನೀರನ್ನು ಗಲಿಬಿಲಿ ಗೊಳಿಸಿದಂತಿರಲಿಲ್ಲ.

ಹೆಸರಿಗೆ ತಕ್ಕಂತೆ ಮಿರರ್ ಲೇಕ್ಸ್ ಕನ್ನಡಿಯನ್ನೂ ಮೀರಿಸುವಂತಿತ್ತು. ಪ್ರವಾಸಿಗರ, ಛಾಯಾಗ್ರಾಹಕರ ಕಣ್ಣಿಗೆ ಸುಗ್ಗಿ, ಮನಸ್ಸಿಗೆ ಹಬ್ಬ. ಆಗಸದಲ್ಲಿ ತೇಲುವ ಬೆಳ್ಳಿಯ ಮೋಡ, ಆನೆ ಡುಬ್ಬದಂಥ ಅರ್ಲ್ ಬೆಟ್ಟ, ಬಂಗಾರ ಬಣ್ಣದ ಶಿಲಾರಾಶಿ, ಎತ್ತರದ ಹುಲ್ಲು, ಪೊದೆ, ಗಿಡ, ಮರಗಳು ಎಲ್ಲವೂ ತಲೆಕೆಳಗಾಗಿ ನೀರಿನಲ್ಲಿ ಕಾಣುತ್ತಿದ್ದವು. ವಿಶೇಷವೆಂದರೆ ಪ್ರತಿಬಿಂಬಗಳು ಪ್ರಾಕೃತಿಕವಾಗಿ ದೊಡ್ಡದಿದ್ದರೂ ಅವು ನೀರಿನಲ್ಲಿ ಚಿಕ್ಕದಾಗಿ ಕಾಣುತ್ತಿದ್ದವು.

ಮಿರರ್ ಲೇಕ್ಸ್‌ಗಳು ಕಡಿದಾದ ಅರ್ಲ್‌ಬೆಟ್ಟಗಳ ಅಂಚಿನ ಚಪ್ಪಟೆ ಭೂಮಿಯಲ್ಲಿ 400 ಮೀಟರ್ ಉದ್ದಕ್ಕೂ ಹರಡಿಕೊಂಡಿವೆ. ನ್ಯೂಜಿಲೆಂಡ್‌ನ ಫೀಯರ್ಡ್ ನ್ಯಾಷನಲ್ ಪಾರ್ಕ್‌ನಲ್ಲಿಯೇ ದೊಡ್ಡದು. ಅದೀಗ ಟೇ ವಾಹಿ ಪೌನಮು (**Te wahi Pounamu**) ವರ್ಲ್ಡ್ ಹೆರಿಟೇಜ್ ಅಗ್ರ ತಾಣವೆಂದು ಗುರುತಿಸಿಕೊಂಡಿದೆ. ಅದರಲ್ಲಿ ಇಗ್ಲಿಂಟನ್ ಕಣಿವೆ ಇದೆ. ಈ ಕಣಿವೆಯೇ ಮಿರ್ರರ್ ಲೇಕ್ಸ್‌ಗಳಿಗೆ ಮೂಲ ನೆಲೆ.

ಹಿಮಯುಗದಲ್ಲಿ ಇಗ್ಲಿಂಟನ್ ಕಣಿವೆ ಸಂಪೂರ್ಣ ಹಿಮಾಚ್ಛಾದಿತವಾಗಿತ್ತು. ಅದರ ಮೇಲಿನ ಅರ್ಲ್ ಬೆಟ್ಟಗಳು ಕೂಡ ಹಿಮಗಿರಿಗಳಾಗಿದ್ದವು. ಲಕ್ಷಾಂತರ ವರ್ಷಗಳಲ್ಲಿ ಇಗ್ಲಿಂಟನ್ ಹಿಮಕಣಿವೆ ಕರಗುತ್ತ ಅಂತಿಮವಾಗಿ ಎಲಿಜನ್ ನದಿಯ ಉಗಮಕ್ಕೆ ಕಾರಣವಾಯಿತು. ಭೂ ಏರಿಳಿತದ ಸರಿದಾಟದಲ್ಲಿ ಎಲಿಜನ್ ನದಿಯು ತನ್ನ ಪಾತ್ರವನ್ನು ಬದಲಿಸಿತು. ಆಗ ತಿರುವುಗಳಲ್ಲಿ ಕೊಂಬಿನಾಕಾರದ (**Oxbow lakes**) ಸರೋವರ ಸೃಷ್ಟಿಯಾದವು. ಅವುಗಳೇ ಇಂದಿನ ಆಕರ್ಷಕ ಮಿರರ್ ಲೇಕ್ಸ್ ಅರ್ಥಾತ್ ದರ್ಪಣ ಸರೋವರಗಳು.

ಅಮೆರಿಕದ ಯೇಸುಮಿಟಿ, ಫ್ರಾನ್ಸ್, ಫಿನ್ಲೆಂಡ್‌ಗಳಲ್ಲೂ ಮಿರರ್ ಲೇಕ್ಸ್‌ಗಳಿವೆ. ಅವುಗಳೆಲ್ಲಾ ಮಾನವನ ಆಧುನಿಕ ಜೀವನ ಶೈಲಿಯಿಂದ, ವಾಯುಗುಣ ಬದಲಾವಣೆಯಿಂದ ತಮ್ಮ ಅಸ್ಮಿತೆಯನ್ನೂ ಕಳೆದುಕೊಂಡಿವೆ. ನ್ಯೂಜಿಲೆಂಡಿನ ಮಿರರ್ ಲೇಕ್ಸ್ ಮಾತ್ರ ಪರಿಶುದ್ಧವಾಗಿದೆ.

ಮಿರರ್ ಲೇಕ್ಸ್ ಬರೀ ಪ್ರತಿಬಿಂಬ ತೋರಿಸುವ ನೀರಿನ ಆಕರಗಳಲ್ಲ; ಅವುಗಳ ಸಮೀಪ ಭೋರ್ಗರೆವ ಜಲಪಾತಗಳಿವೆ. ನ್ಯೂಜಿಲೆಂಡ್ ಡಕ್, ಪಪಾಂಗೊ ಪಕ್ಷಿ, ಸ್ಥಳೀಯ ಹಾವು ಮೀನುಗಳ ಜೀವ ಜಗತ್ತು ಕೂಡ ಆಕರ್ಷಿಸುತ್ತವೆ.